**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 11/2020**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ 1
ಸಿ.ಡಬ್ಲ್ಯೂ ನಂಃ 1
ಸಾಕ್ಷಿಯನ್ನು ದಿನಾಂಕಃ 19-12-2022
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ಪಿ ರಮೇಶ

ತಂದೆಯ ಹೆಸರು ಃ ಸಿ ಫಕೀರಪ್ಪ

ವಯಸ್ಸು ಃ 53 ವರ್ಷ

ಉದ್ಯೋಗ ಃ ಜಿಲ್ಲಾ ವ್ಯವಸ್ಥಾಪಕರು, ಡಾಃ ಅಂಬೇಡ್ಕರ ಅಭಿವೃದ್ಧಿ ನಿಗಮ, ಜಿಲ್ಲಾ ಆಡಳಿತ ಭವನ ದಾವಣಗೇರೆ

ವಾಸ ಸ್ಥಳ ಃ ದಾವಣಗೇರೆ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನಾನು ದಿಃ 5-6-2019 ರಿಂದ 28-1-2020 ರವರೆಗೆ ಜಿಲ್ಲಾ ವ್ಯವಸ್ಥಾಪಕರು, ಡಾಃ ಅಂಬೇಡ್ಕರ ಅಭಿವೃದ್ಧಿ ನಿಗಮ, ಜಿಲ್ಲಾ ಆಡಳಿತ ಭವನ, ಕೊಪ್ಪಳದಲ್ಲಿ ಕೆಲಸ ಮಾಡಿದ್ದೇನೆ.

ದಿಃ 6-1-2021 ರಂದು ಕೊಪ್ಪಳದ ಜಿಲ್ಲಾ ಆಡಳಿತ ಭವನದಲ್ಲಿದ್ದಾಗ ಸಂಜೆ 5-15 ರಿಂದ 5-30 ಗಂಟೆ ಸಮಯದಲ್ಲಿ ಆರೋಪಿತರು ನಮ್ಮ ಕಚೇರಿಗೆ ನುಗ್ಗಿ ಪದ್ಮಾವತಿ ಮಹಿಳಾ ಸ್ವಸಹಾಯ ಸಂಘದ ಕಡತವನ್ನು ಇಂದೇ ಚೆಕ್ಕ ಬರೆದುಕೊಡುವಂತೆ ಕೇಳಿದ್ದರು, ಆಗ ನಾನು ತಾಲ್ಲೂಕು ಅಧಿಕಾರಿಗಳು ವರ್ಗ ಆಗಿದ್ದು, ಹೊಸ ತಾಲ್ಲೂಕು ಅಧಿಕಾರಿಗಳು ಬಂದ ನಂತರ ಕಡತ ಪರಿಶೀಲಿಸಿ ಚೆಕ್ಕ ವಿತರಣೆ ಮಾಡುತ್ತೇನೆಂದು ಹೇಳಿದೆ. ಆಗ ಆರೋಪಿತರು ನನ್ನನ್ನು ಬೈಯ್ದರು, ಪದ್ಮಾ ಎನ್ನುವವರು ನೀನೆಂಥಾ ಅಧಿಕಾರಿ ನಿನಗೆ ಕಾಲುಮುರಿಯುವಂತೆ ಹೊಡೆಯುತ್ತೇನೆ, ಪರಿಶಿಷ್ಟ ಜಾತಿಯ ಅಧಿಕಾರಿ ನೀನು ಉಪಯೋಗವಿಲ್ಲ ಎಂದು ಬೈಯ್ದರು. ಬಹಳ

ಜನರು ನಮ್ಮ ಕಚೇರಿಯಲ್ಲಿ ಕುಳಿತಿದ್ದು ಅವರು ಬಿಡಿಸಿದರು. ಆರೋಪಿ ಸುಜಾತಾ ನನಗೆ ಹಲ್ಲೆ ಮಾಡಲು ಬಂದಿದ್ದು ಆಗ ಅಲ್ಲಿದ್ದ ಗಾಳೆಪ್ಪ ಪೂಜಾರ ಮತ್ತು ದಯಾನಂದ ವಕೀಲರು ನನ್ನನ್ನು ಬಿಡಿಸಿಕೊಂಡರು. ಈ ಬಗ್ಗೆ ಸಿಸಿ ಕ್ಯಾಮರಾದಲ್ಲಿ ದೃಶ್ಯಾವಳಿಗಳನ್ನು ತೆಗೆದು ನಮ್ಮ ಜಿಲ್ಲಾಧಿಕಾರಿಯವರಿಗೆ ತೋರಿಸಿದೆ.

ನಂತರ ದಿಃ 18-1-2020 ರಂದು ದೂರು ಕೊಡಲು ನನಗೆ ಜಿಲ್ಲಾಧಿಕಾರಿಗಳು ಮೌಖಿಕವಾಗಿ ಅನುಮತಿ ಕೊಟ್ಟರು, ಈ ಬಗ್ಗೆ ದೂರನ್ನು ದಾಖಲಿಸಿದ್ದು ಅದನ್ನು ನಿಪಿ 1 ಎಂದು, ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಾನು 2 ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಜಿಲ್ಲಾಧಿಕಾರಿಯವರ ಅನುಮತಿ ಪಡೆಯಲು ತಡವಾಗಿ ನಂತರ ದೂರನ್ನು ಕೊಟ್ಟಿರುತ್ತೇನೆ. ಪೊಲೀಸರು 20 ನೇ ತಾರೀಖಿನಂದು ಕಚೇರಿಗೆ ಬಂದು ಪಂಚನಾಮೆ ಮಾಡಿದ್ದು ಸದರಿ ಪಂಚನಾಮೆಗೆ ನಾನೇ ಸ್ಥಳ ತೋರಿಸಿದ್ದು ಅಲ್ಲಿ ಕಚೇರಿಯಲ್ಲಿದ್ದ ಸಿಬ್ಬಂದಿಗಳ ಸಮಕ್ಷಮ ಪಂಚನಾಮೆಯನ್ನು ಮಾಡಿದರು. ಆ ಸಮಯದಲ್ಲಿ ಫೋಟೋಗಳನ್ನು ತೆಗೆದರು, ಪಂಚನಾಮೆಯನ್ನು ನಿಪಿ 2 ಎಂದು, ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಫೋಟೋಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ಗುರುತಿಸುತ್ತಾರೆ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈ ಜೆ ಆರ್ ವಕೀಲರಿಂದ

ನಾನು ಚಿತ್ರದುರ್ಗದಲ್ಲಿ ಅದಕ್ಕೆ ಮೊದಲು 2 ವರ್ಷ 9 ತಿಂಗಳು ಕೆಲಸ ಮಾಡಿದ್ದೆ. ನಾನು ಅಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನ ವಿರುದ್ಧ ಲೋಕಾಯುಕ್ತ ಕಚೇರಿಯಲ್ಲಿ ಸಾಕಷ್ಟು ಪ್ರಕರಣಗಳು ದಾಖಲಾಗಿತ್ತು, ನಡೆಯುತ್ತಿವೆ ಎಂದರೆ ಸರಿಯಲ್ಲ, ದಿಃ 6-1-2021 ರಂದು ಆರೋಪಿತರು ಬಂದು ಇಂದೇ ಚೆಕ್ಕ ಬರೆಯುವಂತೆ ಗಲಾಟೆ ಮಾಡಿದ್ದರು ಎಂದು ಹೇಳುವ ಕಾಲಕ್ಕೆ ನಮ್ಮ ಕಚೇರಿಯಲ್ಲಿ ಸಾಕಷ್ಟು ಸಿಬ್ಬಂದಿಗಳು ಮತ್ತು ಬೇರೆಯವರು ಇದ್ದರು. ಆರೋಪಿತರು ನನ್ನ ಕಚೇರಿಗೆ ಬಂದಿಲ್ಲ ಮತ್ತು ನನಗೆ ಬೈಯ್ದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಕೀಳು ಜಾತಿಯವರು, ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಬೈಯ್ದಿದ್ದು ನನ್ನ ಉಪಜಾತಿಯನ್ನು ಎತ್ತಿ ಬೈಯ್ದಿಲ್ಲ. ಕೀಳು ಜಾತಿ ಎನ್ನುವುದು ಪರಿಶಿಷ್ಟ ವರ್ಗಕ್ಕೆ ಸಂಬಂಧಪಟ್ಟ ಬಗ್ಗೆ ಯಾವುದೇ ನೊಟೀಫಿಕೇಶನ ಇದೆಯೋ ಇಲ್ಲವೋ ಗೊತ್ತಿಲ್ಲ. ಕೀಳು ಜಾತಿ ಎನ್ನುವುದು ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿಲ್ಲ.

ಆರೋಪಿತರು ಆ ದಿನ ನಮ್ಮ ಕಚೇರಿಗೆ ಬಂದಿಲ್ಲ, ಬೈಯ್ದಿಲ್ಲ ಮತ್ತು ಗಾಳೆಪ್ಪ ಮತ್ತು ದಯಾನಂದ ವಕೀಲರು ಬಿಡಿಸಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಹಿಂದಿನ ವ್ಯವಸ್ಥಾಪಕರು ಆರೋಪಿತರ ವಿರುದ್ಧ ಫಿರ್ಯಾದಿ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿತರು ಹಿಂದಿನ ವ್ಯವಸ್ಥಾಪಕರು ಮಹಾದೇವಸ್ವಾಮಿಯವರಿಗೆ ತೊಂದರೆ ಕೊಟ್ಟಿದ್ದಾರೆ ಎಂಬ ವಿಷಯವನ್ನು ನನಗೆ ಹೇಳಿದ್ದರು. ಆದರೆ ಅವರು ದೂರು ಸಲ್ಲಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಹಿಂದಿನ ವ್ಯವಸ್ಥಾಪಕರು ಮಹಾದೇವಸ್ವಾಮಿಯವರಿಗೆ ಆರೋಪಿತರು ಕಿರುಕುಳ ನೀಡಿದ್ದಾರೆಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಫಲಾನುಭವಿಗಳಿಗೆ ಕೆಲಸ ಮಾಡಿಕೊಡಲು ಲಂಚ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ದಿಃ 19-2-2020 ರಂದು ನಾನು ಫಲಾನುಬವಿಗಳಿಂದ ಲಂಚ ಪಡೆದ ಬಗ್ಗೆ ಕನ್ನಡಮ್ಮ ಪತ್ರಿಕೆಯಲ್ಲಿ ಬಂದಿರುವ ವರದಿಯ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಆರೋಪಿತರಿಗೆ ಲಂಚ ಕೊಡದೇ ಇರುವುದಕ್ಕೆ ಅವರ ವಿರುದ್ಧ ನನ್ನ ಕರ್ತವ್ಯಕ್ಕೆ ಅಡ್ಡಿ ಮಾಡಿದ್ದಾರೆ ಮತ್ತು ಜಾತಿ ನಿಂದನೆ ಮಾಡಿದ್ದಾರೆಂದು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಪದ್ಮಾವತಿ ಮಹಿಳಾ ಸ್ವಸಹಾಯ ಸಂಘದ ಚೆಕ್ಕ ಕೊಡುವಾಗ ರೂ.10,000/- ಲಂಚ ಕೊಟ್ಟರೆ ಮಾತ್ರ ಕೊಡುತ್ತೇನೆ ಎಂದು ಬೇಡಿಕೆ ಇಟ್ಟಿದ್ದು ಅವರು ಕೊಡದೇ ಇರುವುದರಿಂದ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ 12 ದಿನಕ್ಕೆ ದೂರನ್ನು ಸಲ್ಲಿಸಿದೆ. ಕೊಪ್ಪಳ ಜಿಲ್ಲಾ ಆಡಳಿತ ಭವನದಿಂದ ಕೊಪ್ಪಳ ನಗರ ಪೊಲೀಸ ಠಾಣೆ ಸುಮಾರು 10 ನಿಮಿಷದ ದಾರಿ. ನಮ್ಮ ಕಚೇರಿಗೆ ಸರ್ಕಾರಿ ವಾಹನ ಸೌಲಭ್ಯ ಇದೆ. ಘಟನೆಯ ಬಗ್ಗೆ ಅದೇ ದಿನ ಜಿಲ್ಲಾಧಿಕಾರಿಗಳಿಗೆ ಸಂಜೆ 6 ಗಂಟೆಗೆ ಮಾಹಿತಿ ಕೊಟ್ಟೆ. ಜಿಲ್ಲಾಧಿಕಾರಿಗಳು 18 ನೇ ತಾರೀಖಿನಂದು ಬೆಳಿಗ್ಗೆ ನಾನು ಪುನಃ ಬೇಟಿಯಾದಾಗ ಅನುಮತಿ ಕೊಟ್ಟರು. ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಇಲ್ಲದೇ ನಾನು ಠಾಣೆಗೆ ಹೋಗಿ ದೂರನ್ನು ಸಲ್ಲಿಸಲಿಲ್ಲ. ದೂರು ಸಲ್ಲಿಸಲು ತಡವಾದ ಬಗ್ಗೆ ಕಾರಣವನ್ನು ದೂರಿನಲ್ಲಿ ಹೇಳಿಲ್ಲ. ನಾನು 2 ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕನಿದ್ದೆ ಎಂದು ದೂರಿನಲ್ಲಿ ತೋರಿಸಿಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈಯ್ದಿಲ್ಲ, ಜಾತಿ ನಿಂದನೆ ಮಾಡಿಲ್ಲ, ಕೆಲಸಕ್ಕೆ

ಅಡ್ಡಿಪಡಿಸಿಲ್ಲ ಮತ್ತು ಆರೋಪಿತರು ಲಂಚದ ಹಣ ಕೊಡದೇ ಇರುವುದರಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶ್ರೀಮತಿ ಬಿ ಎಸ್ ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ